**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ**

**ಅಸಲು ದಾವಾ ಸಂ.122/2014**
**ವಾ.ಸಾ-1**

**ಮುಂದುವರೆದ ಪಾಟೀ ಸವಾಲು ಶ್ರೀ ಬಿ ಕೆ ಕೆ 2 ನೇ ಪ್ರತಿವಾದಿಯರ ಪರ ವಕೀಲರಿಂದ**

**ಸಾಕ್ಷಿಗೆ ದಿನಾಂಕ 07.02.2020 ರಂದು ಪ್ರಮಾಣ ವಚನ ಬೋಧಿಸಲಾಯಿತು.**

1. 1 ಮತ್ತು 2 ನೇ ಪ್ರತಿವಾದಿಗೆ ದಾವಾ ದಾರಿ ಇಲ್ಲಎಂದು ತಕರಾರು ಮಾಡಿದ್ದೆ ಎಂದರೆ ಸರಿ. ಈ ಕುರಿತು ಸಾರ್ವಜನಿಕರು ಮತ್ತು ಪ್ರತಿವಾದಿಯರು ಸೇರಿ 3 ನೇ ಪ್ರತಿವಾದಿಯ ಕಚೇರಿಗೆ ಸಾರ್ವಜನಿಕ ರಸ್ತೆಗೆ ಅಡ್ಡಿಪಡಿಸಿದ್ದನ್ನು ತೆರೆವುಗೊಳಿಸಲು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ಸದರಿ ವಿಷಯವನ್ನು ಇತ್ಯರ್ಥಪಡಿಸುವಂತೆ ಕಂದಾಯ ನಿರೀಕ್ಷರಿಗೆ ನಿರ್ದೇಶನ ನೀಡಿದ್ದರು ಎಂದರೆ ಗೊತ್ತಿಲ್ಲ. ಸದರಿ ಕಂದಾಯ ನಿರೀಕ್ಷಕರು ಸ್ಥಾನಿಕ ಪರಿಶೀಲನೆ ಮಾಡಿ 3 ನೇ ಪ್ರತಿವಾದಿಯ ಕಚೇರಿಗೆ ವರದಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ಥಾನಿಕ ಪರಿಶೀಲನೆಯ ಕಾಲಕ್ಕೆ ನಾನು ಕೂಡಾ ಹಾಜರಿದ್ದೆ ಎಂದರೆ ಸರಿಯಲ್ಲ. ದಾವಾ ದಾರಿಯನ್ನು ಪರೀಶೀಲನೆ ಮಾಡುವ ಕಾಲಕ್ಕೆ ಭೂಮಾಪನ ಅಧಿಕಾರಿಗಳು ಕೂಡಾ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಮ್ಮನ್ನು ಕರೆಸಿರುವುದಿಲ್ಲ ಎಂದು ನುಡಿಯುವರು.

2. ವಾದಪತ್ರದೊಂದಿಗೆ ಹಾಜರು ಪಡಿಸಿರುವ ಹಾತನಕಾಶೆ ವಸ್ತುಸ್ಥಿತಿಗೆ ವಿರುದ್ಧವಾಗಿದೆ ಎಂದರೆ ಸರಿಯಲ್ಲ. ಸರ್ವೇ ನಂಬರ 254 ರ ಮಾಲೀಕರು ದಾವಾ ದಾರಿಯನ್ನು ಬಿಟ್ಟು ವಡ್ಡನ್ನು ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಪತ್ರದಲ್ಲಿ ತೋರಿಸಿರುವ ಎಬಿಸಿಡಿ ರಸ್ತೆಯು ನಮ್ಮ ಜಮೀನಿನ ಮೂಲಕವೇ ಹಾಯ್ದುಹೊಗುತ್ತದೆ ಎಂದರೆ ಸರಿಯಲ್ಲ. ಸದರಿ ದಾರಿಗೆ ಸರ್ವೇ ನಂಬರ 250 ರಿಂದ

252 ರ ಜಮೀನಿನ ಮಾಲೀಕರು ಯಾವುದೇ ತಕರಾರು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ತೊಂದರೆಕೊಡುವ ಮತ್ತು ದಾವಾ ದಾರಿಯ ಹಕ್ಕನ್ನು ಅಲ್ಲೆಗಲೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**3 ನೇ ಪ್ರತಿವಾದಿ ಏಕಪಕ್ಷೀಯವಾಗಿರುವುದರಿಂದ ಸಾಕ್ಷಿಯ ಪಾಟೀ ಸವಾಲಿನ ಪ್ರಶ್ನೆಯೇ ಉದ್ಭವವಾಗುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. **ನನ್ನ ಸಮಕ್ಷಮ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಬಸವನ ಬಾಗೇವಾಡಿ.**